**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ಭಾಷಾಂತರ ಅಧ್ಯಯನ ವಿಭಾಗ**

**ಮತ್ತು**

**ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ ಜಂಟಿಯಾಗಿ ಆಯೋಜಿಸಿದ್ದ**

**ಅಮ್ಮೆಂಬಳ ಶಂಕರನಾರಾಯಣ ನಾವಡ ದತ್ತಿನಿಧಿ**

**ವಿಶೇಷ ಉಪನ್ಯಾಸ ಕಾರ್ಯಕ್ರಮ** ದಿನಾಂಕ ೨೮.೦೨.೨೦೨೪

**ವಿಷಯ : ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ**









▸ ಅಮ್ಮೆಂಬಳ ಶಂಕರನಾರಾಯಣ ನಾವಡ ದತ್ತಿ ಉಪನ್ಯಾಸ

## 'ಕನ್ನಡ ಸಾಹಿತ್ಯಕ್ಕೆ ಸಂಸ್ಕೃತದ ವಿಶಿಷ್ಟ ಕೊಡುಗೆಯಿದೆ'



**ಕಾರ್ಕಳ, ಮಾ. 1:** ಕನ್ನಡಕ್ಕೆ ಸಂಸ್ಕೃತದ ಪ್ರಭಾವ ಅನಾದಿ ಕಾಲದಿಂದಲೂ ಇದೆ. ಸಂಸ್ಕೃತ ಭಾಷೆ ಕೇವಲ ಭಾಷೆಯಾಗಿ ಉಳಿಯದೆ ಕನ್ನಡ ಸಾಹಿತ್ಯದ ಪ್ರತಿಯೊಂದು ವಿಚಾರದಲ್ಲೂ ವಿಶಿಷ್ಟ ಕೊಡುಗೆಯನ್ನು ಕೊಟ್ಟಿದೆ ಎಂದು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ| ಪರಮಶಿವಮೂರ್ತಿ ಹೇಳಿದರು.

ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಹಂಪಿಯ ಕನ್ನಡ ವಿವಿಯ ಭಾಷಾಂತರ ಅಧ್ಯಯನ ವಿಭಾಗದ ವತಿಯಿಂದ ನಡೆದ ಅಮ್ಮೆಂಬಳ ಶಂಕರನಾರಾಯಣ ನಾವಡ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾಷಾಂತರ ಪ್ರಕ್ರಿಯೆ ಇಂದು ಜೀವನದ ಎಲ್ಲ ಸಂದರ್ಭಗಳಲ್ಲಿ ನಾವು ಮಾಡಿಕೊಳ್ಳುತ್ತೇವೆ. ಅರ್ಥವಾಗದ ಮತ್ತು ಅರ್ಥವಾಗುವ ಭಾಷೆಗಳ ನಡುವೆ ಮಾತ್ರ ಅನುವಾದಗಳಲ್ಲ, ನಮಗೆ ತಿಳಿದಿರುವ ಭಾಷೆಯಾದರೂ ಮಾನಸಿಕವಾಗಿ ಅನುವಾದಗಳು ಬೇಕಾಗುತ್ತವೆ ಎಂದರು.

ಕಾಸರಗೋಡಿನ ವಿಶ್ರಾಂತ ಪ್ರಾಧ್ಯಾಪಕ, ವಿದ್ವಾಂಸ ಡಾ| ಪಿ. ಕೃಷ್ಣ ಭಟ್ ದತ್ತಿ ಉಪನ್ಯಾಸ ನೀಡಿ ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ಎಂಬ ವಿಚಾರ ಮಂಡಿಸಿದರು. ಕಾಳಿದಾಸ, ಭವಭೂತಿ ಮುಂತಾದ ಸಂಸ್ಕೃತ ಕವಿಗಳಿಂದ ಕನ್ನಡದ ಕವಿಗಳು ಪಡೆದುಕೊಂಡ ಎಲ್ಲ ಅಂಶಗಳನ್ನು ವಿವರಿಸಿದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಸಿ.ಎ. ಶಿವಾನಂದ ಪೈ ಅಧ್ಯಕ್ಷತೆ ವಹಿಸಿದ್ದರು. ದತ್ತಿನಿಧಿ ಸಂಸ್ಥಾಪಕ ಪ್ರೊ| ಎ.ವಿ. ನಾವಡ ಮಾತನಾಡಿದರು. ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ| ಮೋಹನ ಕುಂಟಾರ್ ಪ್ರಸ್ತಾವನೆಗೈದರು. ಪ್ರಾಂಶುಪಾಲ ಡಾ| ಮಂಜುನಾಥ್ ಎ. ಕೋಟ್ಯಾನ್ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ| ಅರುಣಕುಮಾರ ಎಸ್. ಆರ್. ಉಪಸ್ಥಿತರಿದ್ದರು. ಕಾಲೇಜಿನ ಆಂತರಿಕ ಗುಣಮಟ್ಟ ಖಾತರಿಕೋಶದ ಸಂಯೋಜಕ ಪ್ರೊ| ನಾಗಭೂಷಣ ವಂದಿಸಿದರು. ಕನ್ನಡ ವಿಭಾಗದ ವನಿತಾ ಶೆಟ್ಟಿ ನಿರೂಪಿಸಿದರು.

## ನಾಳೆ ದತ್ತಿ ಉಪನ್ಯಾಸ

**ಕಾರ್ಕಳ, ಫೆ. 26:** ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಭಾಷಾಂತರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಸಹಯೋಗದಲ್ಲಿ ಅಮ್ಮೆಂಬಳ ಶಂಕರನಾರಾಯಣ ನಾವಡ ದತ್ತಿ ಉಪನ್ಯಾಸ ಕಾರ್ಯಕ್ರಮ ಫೆ.28ರಂದು ಬೆಳಗ್ಗೆ 11ಕ್ಕೆ ಕಾಲೇಜಿನಲ್ಲಿ ನಡೆಯಲಿದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ| ಡಿ.ವಿ. ಪರಮಶಿವಮೂರ್ತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಸಿ.ಎ. ಶಿವಾನಂದ ಪೈ ಅವರು ಅಧ್ಯಕ್ಷತೆ ವಹಿಸಲಿದ್ದು, ದತ್ತಿ ಉಪನ್ಯಾಸವನ್ನು ಕಾಸರಗೋಡಿನ ವಿಶ್ರಾಂತ ಪ್ರಾಧ್ಯಾಪಕ ಡಾ| ಪಿ. ಕೃಷ್ಣ ಭಟ್ ಅವರು ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ಎಂಬ ವಿಷಯದ ಕುರಿತಾಗಿ ನೀಡಲಿದ್ದಾರೆ. ದತ್ತಿ ಸಂಸ್ಥಾಪಕ ಪ್ರೊ| ಎ.ವಿ. ನಾವಡ ಹಾಗೂ ಭಾಷಾಂತರ ವಿಭಾಗದ ಮುಖ್ಯಸ್ಥ ಡಾ| ಮೋಹನ್ ಕುಂಟಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ.
ವಿದ್ಯಾರಣ್ಯ–೫೮೩೨೭೬
ಮತ್ತು
ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ –೫೭೪೧೦೪
ಜಂಟಿಯಾಗಿ ಆಯೋಜಿಸುವ

### ಶ್ರೀ ಅಮ್ಮೆಂಬಳ ಶಂಕರನಾರಾಯಣನಾವಡ ದತ್ತಿಉಪನ್ಯಾಸ

ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ

| | | |
|---|---|---|
| ಅಧ್ಯಕ್ಷತೆ | : | ಶ್ರೀ ಸಿ.ಎ. ಶಿವಾನಂದ ಪೈ<br>ಅಧ್ಯಕ್ಷರು, ಆಡಳಿತ ಮಂಡಳಿ,<br>ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ. |
| ಉದ್ಘಾಟನೆ | : | ಡಾ.ಡಿ. ವಿ. ಪರಮಶಿವಮೂರ್ತಿ<br>ಮಾನ್ಯ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. |
| ವಿಶೇಷ ಉಪನ್ಯಾಸ | : | ಡಾ. ಪಿ. ಶ್ರೀಕೃಷ್ಣಭಟ್<br>ನಿವೃತ್ತ ಪ್ರಾಧ್ಯಾಪಕರು, ಕಾಸರಗೋಡು |
| ಉಪಸ್ಥಿತಿ | : | ಪ್ರೊ. ಎ. ವಿ. ನಾವಡ<br>ನಿವೃತ್ತ ಪ್ರಾಧ್ಯಾಪಕರು, ಕ.ವಿ.ಹಂ. ಮತ್ತು ದತ್ತಿ ಸಂಸ್ಥಾಪಕರು. |
| ಪ್ರಾಸ್ತಾವಿಕ | : | ಡಾ. ಎ. ಮೋಹನ ಕುಂಟಾರ್<br>ಮುಖ್ಯಸ್ಥರು, ಭಾಷಾಂತರ ಅಧ್ಯಯನ ವಿಭಾಗ |
| ಸ್ವಾಗತ | : | ಡಾ. ಮಂಜುನಾಥ ಎ. ಕೋಟ್ಯಾನ್<br>ಪ್ರಾಂಶುಪಾಲರು, ಶ್ರೀ ಭುವನೇಂದ್ರಕಾಲೇಜು, ಕಾರ್ಕಳ |

ದಿನಾಂಕ:೨೮.೦೨.೨೦೨೪ ಬುಧವಾರ, ಬೆಳಗ್ಗೆ ೧೧.೦೦
ಸ್ಥಳ: ಭುವನೇಂದ್ರ ಕಾಲೇಜು

ತಮಗೆ ಆದರದ ಸ್ವಾಗತ

| | |
|---|---|
| ಡಾ. ಮಂಜುನಾಥ ಎ. ಕೋಟ್ಯಾನ್<br>ಪ್ರಾಂಶುಪಾಲರು<br>ಶ್ರೀ ಭುವನೇಂದ್ರಕಾಲೇಜು, ಕಾರ್ಕಳ | ಡಾ. ವಿಜಯ್ ಪೂಣಚ್ಚ ತಂಬಂಡ<br>ಕುಲಸಚಿವರು<br>ಕನ್ನಡ ವಿಶ್ವವಿದ್ಯಾಲಯ, ಹಂಪಿ. |

ಡಾ. ಎ. ಮೋಹನ ಕುಂಟಾರ್
ಮುಖ್ಯಸ್ಥರು, ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.